# ಮೇಕೆದಾಟು ಯೋಜನೆ ವಿರುದ್ಧ ಕಾನೂನು ಹೋರಾಟ ಮುಂದುವರಿಕೆ: ತಮಿಳುನಾಡು ಸರ್ಕಾರದ ಘೋಷಣೆ


## ಮೇಕೆದಾಟು ಜಾರಿಯಾದರೆ ತಮಿಳುನಾಡಿನ ರೈತರಿಗೆ ಹೊಡೆತ:ಕರ್ನಾಟಕದ ವಿರುದ್ಧ ತಮಿಳುನಾಡಿನ ಎಚ್ಚರಿಕೆ

**ಚೆನ್ನೈ:** ಕರ್ನಾಟಕ ಸರ್ಕಾರ ಪ್ರಸ್ತಾಪಿಸಿರುವ ಮೇಕೆದಾಟು ಬಹುಉದ್ದೇಶಿತ ಅಣೆಕಟ್ಟು ಯೋಜನೆಯನ್ನು ತಡೆಯಲು ಅಗತ್ಯವಿರುವ ಎಲ್ಲಾ ಕಾನೂನು ಮತ್ತು ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಮಿಳುನಾಡು ಸರ್ಕಾರ ಸ್ಪಷ್ಟಪಡಿಸಿದೆ. ಇದೇ ವೇಳೆ, ಕೇರಳದೊಂದಿಗೆ ದೀರ್ಘಕಾಲದಿಂದ ಮುಂದುವರಿದಿರುವ ಮುಲ್ಲೈಪೆರಿಯಾರ್ ಅಣೆಕಟ್ಟು ವಿವಾದದಲ್ಲಿಯೂ ತಮಿಳುನಾಡಿನ ಹಕ್ಕುಗಳನ್ನು ರಕ್ಷಿಸಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದೆ.

ಹೊಸ ಟಿವಿಕೆ ಸರ್ಕಾರದ ಮೊದಲ ವಿಧಾನಸಭಾ ಅಧಿವೇಶನದ ಆರಂಭದಲ್ಲಿ ರಾಜ್ಯಪಾಲ ಆರ್.ವಿ. ಅರ್ಲೇಕರ್ ಅವರು ಮಾಡಿದ ಭಾಷಣದಲ್ಲಿ ರಾಜ್ಯ ಸರ್ಕಾರದ ಪ್ರಮುಖ ನೀತಿಗಳು ಮತ್ತು ಆದ್ಯತೆಗಳನ್ನು ವಿವರಿಸಿದರು. ಈ ವೇಳೆ ಕಾವೇರಿ ಜಲ ಹಂಚಿಕೆ, ಮೇಕೆದಾಟು ಯೋಜನೆ, ಮುಲ್ಲೈಪೆ-ರಿಯಾರ್ ಅಣೆಕಟ್ಟು ಹಾಗೂ ನದಿಗಳ ಜೋಡಣೆ ಯೋಜನೆಗಳ ಕುರಿತು ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಿದರು.

**ಕಾವೇರಿ ತಮಿಳುನಾಡಿನ ಕೃಷಿಯ ಜೀವನಾಡಿ:** ಭಾಷಣದಲ್ಲಿ ಕಾವೇರಿ ನದಿಯ ಮಹತ್ವವನ್ನು ಉಲ್ಲೇಖಿಸಿದ ರಾಜ್ಯಪಾಲರು, ಕಾವೇರಿ ಡೆಲ್ಟಾ ಪ್ರದೇಶವು ತಮಿಳುನಾಡಿನ ಅನ್ನದಾತ ಪ್ರದೇಶವಾಗಿದ್ದು, ಲಕ್ಷಾಂತರ ರೈತರು ತಮ್ಮ ಕೃಷಿ ಚಟುವಟಿಕೆಗಳಿಗಾಗಿ ಕಾವೇರಿ ನೀರನ್ನು ಅವಲಂಬಿಸಿದ್ದಾರೆ ಎಂದು ಹೇಳಿದರು.

"ತಮಿಳುನಾಡಿಗೆ ಕಾವೇರಿ ನೀರನ್ನು ಬಳಸುವ ಹಕ್ಕು ಅನಾದಿಕಾಲದಿಂದಲೂ ಇದೆ. ರಾಜ್ಯದ ಕೃಷಿ, ಕುಡಿಯುವ ನೀರು ಹಾಗೂ ಗ್ರಾಮೀಣ ಆರ್ಥಿಕ ವ್ಯವಸ್ಥೆ ಕಾವೇರಿ ನೀರಿನ ಮೇಲೆ ಅವಲಂಬಿತವಾಗಿದೆ. ಈ ಹಿನ್ನೆಲೆಯಲ್ಲಿ ಕಾವೇರಿ ನೀರಿನ ಹಂಚಿಕೆಯಲ್ಲಿ ತಮಿಳುನಾಡಿನ ಹಕ್ಕುಗಳನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷಿಸಲಾಗುವುದಿಲ್ಲ," ಎಂದು ಅವರು ಹೇಳಿದರು.




**ಸುಪ್ರೀಂ ಕೋರ್ಟ್ ತೀರ್ಪಿದ್ದರೂ ನೀರಿಗಾಗಿ ಹೋರಾಟ:** ಕಾವೇರಿ ನೀರು ಹಂಚಿಕೆ ವಿವಾದದಲ್ಲಿ ಸುಪ್ರೀಂ ಕೋರ್ಟ್ ತಮಿಳುನಾಡಿನ ಹಕ್ಕುಗಳನ್ನು ಮಾನ್ಯಗೊಳಿಸಿ ತೀರ್ಪು ನೀಡಿದ್ದರೂ, ಪ್ರತಿ ವರ್ಷವೂ ರಾಜ್ಯವು ತನ್ನ ಪಾಲಿನ ನೀರಿಗಾಗಿ ಹೋರಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ರಾಜ್ಯಪಾಲರು ಅಸಮಾಧಾನ ವ್ಯಕ್ತಪಡಿಸಿದರು.

ತಮಿಳುನಾಡಿಗೆ ನಿಗದಿಪಡಿಸಿರುವ ಪ್ರಮಾಣದ ನೀರನ್ನು ಸಮಯಕ್ಕೆ ಸರಿಯಾಗಿ ಬಿಡುಗಡೆ ಮಾಡುವ ಬದಲು, ಕರ್ನಾಟಕ ಸರ್ಕಾರ ಹೆಚ್ಚುವರಿ ನೀರು ಲಭ್ಯವಿರುವ ಸಂದರ್ಭಗಳಲ್ಲಿ ಮಾತ್ರ ನೀರು ಹರಿಸುತ್ತಿದೆ ಎಂಬ ಆರೋಪವನ್ನೂ ಅವರು ಮಾಡಿದರು. ಇದರಿಂದ ಕೃಷಿ ಚಟುವಟಿಕೆಗಳ ಯೋಜನೆಗೆ ಅಡಚಣೆ ಉಂಟಾಗುತ್ತಿದೆ ಎಂದು ಹೇಳಿದರು.

**ಮೇಕೆದಾಟು ಯೋಜನೆಗೆ ತೀವ್ರ ವಿರೋಧ:** ಕರ್ನಾಟಕ ಸರ್ಕಾರ ಕಾವೇರಿ ನದಿಗೆ ಅಡ್ಡವಾಗಿ ಮೇಕೆದಾಟು ಅಣೆಕಟ್ಟು ನಿರ್ಮಿಸುವ ಯೋಜನೆಯನ್ನು ಮುಂದುವರಿಸುತ್ತಿರುವುದು ತಮಿಳುನಾಡಿನಲ್ಲಿ ಆತಂಕಕ್ಕೆ ಕಾರಣವಾಗಿದೆ ಎಂದು ರಾಜ್ಯಪಾಲರು ತಿಳಿಸಿದರು.

"ಮೇಕೆದಾಟು ಯೋಜನೆ ಜಾರಿಯಾದರೆ ಕಾವೇರಿ ನೀರಿನ ಹರಿವು ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಇದರಿಂದ ತಮಿಳುನಾಡಿನ ಕೃಷಿ ಉತ್ಪಾದನೆ, ಕುಡಿಯುವ ನೀರಿನ ಸರಬರಾಜು ಹಾಗೂ ರೈತರ ಜೀವನೋಪಾಯಕ್ಕೆ ಗಂಭೀರ ಪರಿಣಾಮ ಉಂಟಾಗಬಹುದು. ಆದ್ದರಿಂದ ಈ ಯೋಜನೆಯನ್ನು ತಡೆಯಲು ಸರ್ಕಾರ ಅಗತ್ಯವಿರುವ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲಿದೆ," ಎಂದು ಅವರು ಹೇಳಿದರು.

ಯೋಜನೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳು, ಕೇಂದ್ರ ಸರ್ಕಾರ ಹಾಗೂ ಸಂಬಂಧಿತ ಸಂಸ್ಥೆಗಳ ಮುಂದೆ ತಮಿಳುನಾಡಿನ ನಿಲುವನ್ನು ಬಲವಾಗಿ ಮಂಡಿಸಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು.

**ಮುಲ್ಲೈಪೆರಿಯಾರ್ ಅಣೆಕಟ್ಟು ವಿವಾದ:** ಭಾಷಣದಲ್ಲಿ ಮುಲ್ಲೈಪೆರಿಯಾರ್ ಅಣೆಕಟ್ಟಿನ ವಿಷಯಕ್ಕೂ ಹೆಚ್ಚಿನ ಮಹತ್ವ ನೀಡಲಾಯಿತು. ದಕ್ಷಿಣ ತಮಿಳುನಾಡಿನ ಹಲವು ಜಿಲ್ಲೆಗಳ ಕೃಷಿ ಮತ್ತು ಕುಡಿಯುವ ನೀರಿನ ಅವಶ್ಯಕತೆಗಳನ್ನು ಪೂರೈಸುವಲ್ಲಿ ಮುಲ್ಲೈಪೆರಿಯಾರ್ ಅಣೆಕಟ್ಟು ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ರಾಜ್ಯಪಾಲರು ಹೇಳಿದರು.

"ಮುಲ್ಲೈಪೆರಿಯಾರ್ ಅಣೆಕಟ್ಟು ದಕ್ಷಿಣ ತಮಿಳುನಾಡಿನ ಜನರ ಜೀವನಾಡಿಯಾಗಿದೆ. ಲಕ್ಷಾಂತರ ರೈತರು ಹಾಗೂ ಜನಸಾಮಾನ್ಯರು ಇದರ ಮೇಲೆ ಅವಲಂಬಿತರಾಗಿದ್ದಾರೆ. ಆದ-ದ್ದರಿಂದ ಈ ಅಣೆಕಟ್ಟಿನ ಸುರಕ್ಷತೆ ಹಾಗೂ ನೀರಿನ ಸಂಗ್ರಹ ಸಾಮರ್ಥ್ಯವನ್ನು ಕಾಪಾಡುವುದು ಸರ್ಕಾರದ ಆದ್ಯತೆಯಾಗಿದೆ," ಎಂದು ಅವರು ಹೇಳಿದರು.

**ಸುಪ್ರೀಂ ಕೋರ್ಟ್ ಆದೇಶದಂತೆ 152 ಅಡಿ ನೀರಿನ ಮಟ್ಟ:** 2014ರಲ್ಲಿ ಸುಪ್ರೀಂ ಕೋರ್ಟ್ ಮುಲ್ಲೈಪೆರಿಯಾರ್ ಅಣೆಕಟ್ಟಿನ ನೀರಿನ ಮಟ್ಟವನ್ನು 142 ಅಡಿವರೆಗೆ ಹೆಚ್ಚಿಸಲು ಅನುಮತಿ ನೀಡಿತ್ತು. ಅಲ್ಲದೆ, ಅಗತ್ಯ ಬಲವರ್ಧನೆ ಮತ್ತು ಸುರಕ್ಷತಾ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ನೀರಿನ ಮಟ್ಟವನ್ನು 152 ಅಡಿವರೆಗೆ ಏರಿಸಬಹುದೆಂದು ಸೂಚಿಸಿತ್ತು.

ಆದರೆ ಕೇರಳ ಸರ್ಕಾರ ಅಗತ್ಯ ಕಾಮಗಾರಿಗಳಿಗೆ ಅನುಮತಿ ನೀಡದೆ, ಹೊಸ ಅಣೆಕಟ್ಟು ನಿರ್ಮಾಣದ ಬೇಡಿಕೆಯನ್ನು ಮುಂದುವರಿಸುತ್ತಿದೆ ಎಂದು ರಾಜ್ಯಪಾಲರು ಆರೋಪಿಸಿದರು.

**ಕೇರಳದ ಹೊಸ ಅಣೆಕಟ್ಟು ಪ್ರಸ್ತಾವನೆಗೆ ವಿರೋಧ:** ತಮಿಳುನಾಡು ಸರ್ಕಾರ ಕೇರಳದ ಹೊಸ ಅಣೆಕಟ್ಟು ನಿರ್ಮಾಣದ ಪ್ರಸ್ತಾವನೆಯನ್ನು ವಿರೋಧಿಸುತ್ತಿದ್ದು, ಅಸ್ತಿತ್ವದಲ್ಲಿರುವ ಮುಲ್ಲೈಪೆರಿಯಾರ್ ಅಣೆಕಟ್ಟನ್ನು ಬಲಪಡಿಸಿ ಅದರ ನೀರಿನ ಮಟ್ಟವನ್ನು ಹೆಚ್ಚಿಸುವುದೇ ಸೂಕ್ತ ಪರಿಹಾರ ಎಂಬ ನಿಲುವು ಹೊಂದಿದೆ ಎಂದು ಅವರು ಹೇಳಿದರು.

ಈ ನಿಟ್ಟಿನಲ್ಲಿ ಅಗತ್ಯ ದುರಸ್ತಿ, ಬಲವರ್ಧನೆ ಮತ್ತು ಸುರಕ್ಷತಾ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರ ಕ್ರಮ ವಹಿಸಲಿದೆ ಎಂದು ರಾಜ್ಯಪಾಲರು ತಿಳಿಸಿದರು.

**ನದಿಗಳ ಜೋಡಣೆ ಯೋಜನೆಗೆ ಸರ್ಕಾರದ ಆದ್ಯತೆ:** ರಾಜ್ಯದ ನೀರಿನ ನಿರ್ವಹಣೆಯನ್ನು ಮತ್ತಷ್ಟು ಪರಿಣಾಮಕಾ-ರಿಯಾಗಿ ಮಾಡಲು ನದಿಗಳ ಜೋಡಣೆ ಯೋಜನೆಗೆ ಸರ್ಕಾರ ಹೆಚ್ಚಿನ ಒತ್ತು ನೀಡಲಿದೆ ಎಂದು ರಾಜ್ಯಪಾಲರು ಘೋಷಿಸಿದರು.

ಮೊದಲ ಹಂತದಲ್ಲಿ ತಮಿಳುನಾಡಿನ ಒಳನಾಡಿನ ನದಿಗಳನ್ನು ಪರಸ್ಪರ ಸಂಪರ್ಕಿಸುವ ಯೋಜನೆಗಳನ್ನು ಜಾರಿಗೆ ತರಲಾಗುವುದು. ಇದರಿಂದ ನೀರಿನ ಸಮರ್ಪಕ ಬಳಕೆ, ಬರಪೀಡಿತ ಪ್ರದೇಶಗಳಿಗೆ ನೀರಿನ ಲಭ್ಯತೆ ಹಾಗೂ ಕೃಷಿ ಅಭಿವೃದ್ಧಿಗೆ ನೆರವಾಗಲಿದೆ ಎಂದು ಅವರು ಹೇಳಿದರು.

**ದಕ್ಷಿಣ ಭಾರತದ ನದಿಗಳ ಜೋಡಣೆಗೆ ಕೇಂದ್ರಕ್ಕೆ ಒತ್ತಾಯ:** ಇದಕ್ಕೂ ಮೀರಿಯಾಗಿ ದಕ್ಷಿಣ ಭಾರತದ ಪ್ರಮುಖ ನದಿಗಳನ್ನು ಪರಸ್ಪರ ಜೋಡಿಸುವ ಮಹತ್ವಾಕಾಂಕ್ಷಿ ಯೋಜನೆಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ಮುಂದಾಗಬೇಕು ಎಂದು ರಾಜ್ಯ ಸರ್ಕಾರ ಒತ್ತಾಯಿಸಲಿದೆ ಎಂದು ರಾಜ್ಯಪಾಲರು ಹೇಳಿದರು.

ಈ ಯೋಜನೆ ಅನುಷ್ಠಾನಗೊಂಡರೆ ರಾಜ್ಯಗಳ ನಡುವೆ ನೀರಿನ ಹಂಚಿಕೆ ಸಮಸ್ಯೆಗಳನ್ನು ಕಡಿಮೆ ಮಾಡುವುದು, ಪ್ರವಾಹ ಮತ್ತು ಬರದ ಸಮಸ್ಯೆಗಳಿಗೆ ದೀರ್ಘಕಾಲಿಕ ಪರಿಹಾರ ಒದಗಿಸುವುದು ಹಾಗೂ ಕೃಷಿ ಮತ್ತು ಕುಡಿಯುವ ನೀರಿನ ಭದ್ರತೆಯನ್ನು ಹೆಚ್ಚಿಸುವುದು ಸಾಧ್ಯವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಒಟ್ಟಾರೆಯಾಗಿ, ಕಾವೇರಿ ನೀರಿನ ಹಕ್ಕು, ಮೇಕೆದಾಟು ಯೋಜನೆ ವಿರೋಧ, ಮುಲ್ಲೈಪೆರಿಯಾರ್ ಅಣೆಕಟ್ಟಿನ ನೀರಿನ ಮಟ್ಟ ಹೆಚ್ಚಳ ಹಾಗೂ ನದಿಗಳ ಜೋಡಣೆ ಯೋಜನೆಗಳ ಮೂಲಕ ತಮಿಳುನಾಡಿನ ಜಲ ಹಕ್ಕುಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಸರ್ಕಾರ ದೃಢ ನಿಲುವು ಹೊಂದಿದೆ ಎಂಬ ಸಂದೇಶವನ್ನು ರಾಜ್ಯಪಾಲರ ಭಾಷಣ ಸ್ಪಷ್ಟಪಡಿಸಿದೆ.

# ಜನ ಎಲ್ಲೆಂದರಲ್ಲಿ ಕಸ ಎಸೆದರೆ ದುಪ್ಪಟ್ಟು ದಂಡ! ಸುರಿದವರಿಂದಲೇ ತೆರವು..

**ಬೆಂಗಳೂರು:** ರಾಜಧಾನಿ ಬೆಂಗಳೂರಿನಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರ ಮುಂದಾಗಿದೆ. ಇನ್ಮುಂದೆ ರಸ್ತೆ, ಪಾದಚಾರಿ ಮಾರ್ಗ, ಖಾಲಿ ಜಾಗಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವವರ ಮೇಲೆ ದುಪ್ಪಟ್ಟು ದಂಡ ವಿಧಿಸುವುದರ ಜೊತೆಗೆ, ಅವರು ಎಸೆದ ಕಸವನ್ನು ಅವರಿಂದಲೇ ತೆರವುಗೊಳಿಸುವ ಹೊಸ ವ್ಯವಸ್ಥೆಯನ್ನು ಜಾರಿಗೆ ತರಲು ನಿರ್ಧರಿಸಲಾಗಿದೆ.

ಈ ಮಹತ್ವದ ತೀರ್ಮಾನವನ್ನು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಕುರಿತಂತೆ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಕೈಗೊಳ್ಳಲಾಗಿದೆ.

ಸಭೆಯಲ್ಲಿ ನಗರದಲ್ಲಿ ಹೆಚ್ಚುತ್ತಿರುವ ಕಸ ಸಮಸ್ಯೆ, ಸಾರ್ವಜನಿಕರ ನಿರ್ಲಕ್ಷ್ಯ, ಕಸ ವಿಲೇವಾರಿ ವ್ಯವಸ್ಥೆಯಲ್ಲಿನ ಕೊರತೆಗಳು ಹಾಗೂ ನಗರದ ಸ್ವಚ್ಛತೆ ಕಾಪಾಡುವ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಈ ವೇಳೆ ಅಧಿಕಾರಿಗಳಿಗೆ ಹಲವು ಕಟ್ಟುನಿಟ್ಟಿನ ಸೂಚನೆಗಳನ್ನು ಸಚಿವರು ನೀಡಿದರು.

**ಕಸ ಎಸೆದರೆ ದಂಡ ಮಾತ್ರವಲ್ಲ, ಸ್ವಚ್ಛಗೊಳಿಸುವ ಶಿಕ್ಷೆಯೂ:** ನಗರದ ವಿವಿಧ ಭಾಗಗಳಲ್ಲಿ ಮನೆ ಮನೆಗೆ ಕಸ ಸಂಗ್ರಹಿಸುವ ವಾಹನಗಳು ತೆರಳುತ್ತಿದ್ದರೂ ಕೆಲವರು ರಸ್ತೆ ಬದಿ, ಖಾಲಿ ಜಾಗಗಳು ಹಾಗೂ ಸಾರ್ವಜನಿಕ ಪ್ರದೇಶಗಳಲ್ಲಿ ಕಸ ಎಸೆಯುತ್ತಿರುವುದು ಕಂಡುಬರುತ್ತಿದೆ. ಇದರಿಂದ ನಗರದ ಸೌಂದರ್ಯ ಹಾಳಾಗುವುದರ ಜೊತೆಗೆ ಆರೋಗ್ಯ ಸಮಸ್ಯೆಗಳು ಕೂಡ ಹೆಚ್ಚಾಗುತ್ತಿವೆ.

ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ರಸ್ತೆಯಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುತ್ತಿರುವುದು ಕಂಡುಬಂದರೆ ಅವರಿಗೆ ಈಗಿರುವ ದಂಡಕ್ಕಿಂತ ದುಪ್ಪಟ್ಟು ದಂಡ ವಿಧಿಸುವುದರ ಜೊತೆಗೆ, ಅವರು ಎಸೆದ ಕಸವನ್ನು ಅವರಿಂದಲೇ ತೆರವುಗೊಳಿಸುವ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

**ಕಸ ಎಸೆಯುವ ಪ್ರದೇಶಗಳಲ್ಲಿ ಹೆಚ್ಚುವರಿ ಮಾರ್ಷಲ್‌ಗಳ ನಿಯೋಜನೆ:** ನಗರದ ಕೆಲವು ಪ್ರದೇಶಗಳಲ್ಲಿ ಪದೇಪದೇ ಕಸ ಎಸೆಯುವ ಪ್ರಕರಣಗಳು ಕಂಡುಬರುತ್ತಿರುವ ಹಿನ್ನೆಲೆಯಲ್ಲಿ ಅಂತಹ ಪ್ರದೇಶಗಳಲ್ಲಿ ಮಾರ್ಷಲ್‌ಗಳ ಸಂಖ್ಯೆಯನ್ನು ಹೆಚ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.



ರಸ್ತೆ ಬದಿ ಕಸ ಸುರಿಯುವವರ ಮೇಲೆ ನಿಗಾ ವಹಿಸಲು ವಿಶೇಷ ತಂಡಗಳನ್ನು ರಚಿಸುವುದರ ಜೊತೆಗೆ, ಅಗತ್ಯವಿದ್ದರೆ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚಿಸಲಾಗಿದೆ.

**ಹಸಿ ಕಸದಿಂದ ಗೊಬ್ಬರ ತಯಾರಿಕೆಗೆ ಉತ್ತೇಜನ:** ಸಭೆಯಲ್ಲಿ ಹಸಿ ತ್ಯಾಜ್ಯವನ್ನು ಪರಿಣಾಮಕಾರಿಯಾಗಿ ಬಳಸುವ ಬಗ್ಗೆ ವಿಶೇಷವಾಗಿ ಚರ್ಚಿಸಲಾಯಿತು. ಮನೆಗಳಲ್ಲಿ ಉತ್ಪತ್ತಿಯಾಗುವ ಹಸಿ ತ್ಯಾಜ್ಯವನ್ನು ಎರೆಗೊಬ್ಬರವಾಗಿ ಪರಿವರ್ತಿಸಲು ನಾಗರಿಕರನ್ನು ಪ್ರೋತ್ಸಾಹಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಟೆರೇಸ್ ಗಾರ್ಡನಿಂಗ್, ಮನೆಯ ತೋಟಗಳು ಹಾಗೂ ಪರಿಸರ ಸ್ನೇಹಿ ಜೀವನಶೈಲಿಯ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಸಚಿವರು ನಿರ್ದೇಶನ ನೀಡಿದ್ದಾರೆ.

ಮನೆಯಲ್ಲೇ ಕಾಂಪೋಸ್ಟ್ ಗೊಬ್ಬರ ತಯಾರಿಸುವ ವಿಧಾನಗಳ ಕುರಿತು ತರಬೇತಿ ಹಾಗೂ ಅರಿವು ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಕಸದ ಪ್ರಮಾಣವನ್ನು ಕಡಿಮೆ ಮಾಡುವ ಗುರಿಯನ್ನು ಸರ್ಕಾರ ಹೊಂದಿದೆ.

**ಹಸಿ ಕಸ – ಒಣ ಕಸ ಕಡ್ಡಾಯ ವಿಂಗಡಣೆ:** ಬೆಂಗಳೂರು ನಗರದಲ್ಲಿ ಕಸ ವಿಂಗಡಣೆ ವ್ಯವಸ್ಥೆಯನ್ನು ಇನ್ನಷ್ಟು ಕಟ್ಟುನಿಟ್ಟಾಗಿ ಜಾರಿಗೊಳಿಸಲು ನಿರ್ಧ-ರಿಸಲಾಗಿದೆ.

ಪ್ರತಿ ಮನೆಯಿಂದ ಹಸಿ ಕಸ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸುವುದನ್ನು ಕಡ್ಡಾಯಗೊಳಿಸಲಾಗಿದ್ದು, ಮಿಶ್ರ ಕಸವನ್ನು ಸ್ವೀಕ-ರಿಸದಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಅಷ್ಟೇ ಅಲ್ಲದೆ, ಮನೆಗಳಿಂದ ಸಂಗ್ರಹಿಸಿದ ಕಸವನ್ನು ವಿಂಗಡಿಸಿದ ಸ್ಥಿತಿಯಲ್ಲೇ ಸಂಸ್ಕರಣಾ ಘಟಕಗಳಿಗೆ ತಲುಪಿಸಬೇಕು. ಇದರಿಂದ ಕಸದ ಮರುಬಳಕೆ ಹಾಗೂ ವೈಜ್ಞಾನಿಕ ವಿಲೇವಾರಿ ಪ್ರಕ್ರಿಯೆ ಸುಗಮವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಮನೆ ಮನೆಗೆ ಕಸದ ವಾಹನ ತಲುಪುವಂತೆ ಕ್ರಮ:** ಕಸ ಸಂಗ್ರಹಣೆ ಕುರಿತು ಸಾರ್ವಜನಿಕರಿಂದ ಬರುತ್ತಿರುವ ದೂರುಗಳನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರ, ನಗರದ ಪ್ರತಿಯೊಂದು ಮನೆಗೂ ಕಸದ ವಾಹನ ತಲುಪುವಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ಯಾವುದೇ ಪ್ರದೇಶದಲ್ಲಿ ಕಸದ ವಾಹನಗಳು ನಿಯಮಿತವಾಗಿ ಸಂಚರಿಸದಿದ್ದರೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ.

**ಮುಖ್ಯ ರಸ್ತೆಗಳಲ್ಲಿ ವಿಶೇಷ ಸ್ವಚ್ಛತಾ ಅಭಿಯಾನ:** ನಗರದ ಪ್ರಮುಖ ರಸ್ತೆಗಳು, ಪಾದಚಾರಿ ಮಾರ್ಗಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಬಿದ್ದಿರುವ ಕಸ, ಕಟ್ಟಡ ಅವಶೇಷಗಳು (ಡೆಬ್ರಿಸ್), ಕಳೆಗಳು ಮತ್ತು ಇತರೆ ತ್ಯಾಜ್ಯಗಳನ್ನು ತೆರವುಗೊಳಿಸಲು ವಿಶೇಷ ಸ್ವಚ್ಛತಾ ಅಭಿಯಾನ ಕೈಗೊಳ್ಳಲು ನಿರ್ಧ-ರಿಸಲಾಗಿದೆ.

ಒಂದು ಬಾರಿಯ ಸಮಗ್ರ ಕಾರ್ಯಾಚರಣೆಯ ಮೂಲಕ ನಗರವನ್ನು ಸ್ವಚ್ಛಗೊಳಿಸುವ ಗುರಿಯನ್ನು ಸರ್ಕಾರ ಹೊಂದಿದ್ದು, ಎಲ್ಲಾ ಪಾಲಿಕೆಗಳಿಗೆ ಈ ಸಂಬಂಧ ಸೂಚನೆ ನೀಡಲಾಗಿದೆ.

**ಸಿಎಂ ನಿರ್ದೇಶನದಂತೆ ಸಭೆ:** ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವ ಕೃಷ್ಣ ಬೈರೇಗೌಡ, ಮುಖ್ಯಮಂತ್ರಿ ಅವರ ನಿರ್ದೇಶನದ ಮೇರೆಗೆ ಈ ಸಭೆ ನಡೆಸಲಾಗಿದೆ ಎಂದು ತಿಳಿಸಿದರು.

"ಮುಖ್ಯ ಆಯುಕ್ತರು, ಐದು ನಗರ ಪಾಲಿಕೆಗಳ ಆಯುಕ್ತರು ಹಾಗೂ ಹಿರಿಯ ಅಧಿಕಾ-ರಿಗಳೊಂದಿಗೆ ಹಲವು ಗಂಟೆಗಳ ಕಾಲ ಸಭೆ ನಡೆಸಲಾಗಿದೆ. ಕಸ ನಿರ್ವಹಣೆ, ಸಂಗ್ರಹಣೆ ಮತ್ತು ವಿಲೇವಾರಿ ವ್ಯವಸ್ಥೆಯ ಸುಧಾರಣೆ ಕುರಿತು ಚರ್ಚೆ ಮಾಡಲಾಗಿದೆ," ಎಂದು ಹೇಳಿದರು.

**ಬೆಂಗಳೂರಿನ ಆರೋಗ್ಯ ಮತ್ತು ಸೌಂದರ್ಯ ಕಾಪಾಡಬೇಕು:** ಕೆಲ ಸಾರ್ವಜನಿಕರು ಮನೆ ಬಳಿ ಕಸದ ವಾಹನ ಬಂದರೂ ರಸ್ತೆಯಲ್ಲೇ ಕಸ ಎಸೆಯುತ್ತಿರುವುದು ಬೇಸರದ ಸಂಗತಿ. ಇಂತಹ ನಿರ್ಲಕ್ಷ್ಯದಿಂದ ನಗರದ ಆರೋಗ್ಯ ಹಾಗೂ ಸೌಂದರ್ಯ ಎರಡೂ ಹಾಳಾಗುತ್ತಿವೆ ಎಂದು ಸಚಿವರು ಅಸಮಾಧಾನ ವ್ಯಕ್ತಪಡಿಸಿದರು.

"ಕಸದ ವಾಹನ ಮನೆಗೆ ಬಾರದಿದ್ದರೆ ಸಾರ್ವಜನಿಕರು ದೂರು ನೀಡಬೇಕು. ಆದರೆ ರಸ್ತೆ ಬದಿ ಕಸ ಎಸೆಯುವುದು ಯಾವುದೇ ಕಾರಣಕ್ಕೂ ಸಮರ್ಥನೀಯವಲ್ಲ. ಬೆಂಗಳೂರು ಸ್ವಚ್ಛ ಮತ್ತು ಸುಂದರ ನಗರವಾಗಬೇಕಾದರೆ ನಾಗರಿಕರ ಸಹಕಾರ ಅತ್ಯಗತ್ಯ," ಎಂದು ಹೇಳಿದರು.

**ಜನರ ಸಹಕಾರವೂ ಅಗತ್ಯ:** ಬೆಂಗಳೂರು ನಗರವನ್ನು ಸ್ವಚ್ಛ, ಸುಂದರ ಹಾಗೂ ಆರೋಗ್ಯಕರ ನಗರವನ್ನಾಗಿ ರೂಪಿಸಲು ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿದೆ. ಆದರೆ ಇದಕ್ಕೆ ನಾಗರಿಕರ ಸಹಕಾರವೂ ಅಷ್ಟೇ ಮುಖ್ಯವಾಗಿದೆ ಎಂದು ಸಚಿವರು ಹೇಳಿದ್ದಾರೆ.

ಕಸವನ್ನು ಸರಿಯಾಗಿ ವಿಂಗಡಿಸಿ ನೀಡುವುದು, ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯದಿರುವುದು ಹಾಗೂ ನಗರ ಸ್ವಚ್ಛತೆ ಕಾಪಾಡುವಲ್ಲಿ ಸಹಕರಿಸುವ ಮೂಲಕ ಪ್ರತಿಯೊಬ್ಬ ಬೆಂಗಳೂರಿಗರೂ ತಮ್ಮ ಜವಾಬ್ದಾರಿಯನ್ನು ನಿಭಾಯಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

# ಮಸಣಾಪುರ ಘಟನೆ: ಅಂಬೇಡ್ಕರ್ ಸೇವಾ ಸಮಿತಿ ಖಂಡನೆ



ಯಳಂದೂರು: ಯಳಂದೂರು ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಡುವ ಮಸಣಾಪುರ ಗ್ರಾಮದಲ್ಲಿ ಯುವಕನೋರ್ವ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿರುವ ಯುವಕನ ಪರವಾಗಿ ಕೆಲವರು ಸಮರ್ಥನೆ ಮಾಡಿಕೊಂಡಿರುವುದು ಅಂಬೇಡ್ಕರ್‌ರವರಿಗೆ ಮಾಡಿದ ಅಪಮಾನವಾಗಿದೆ ಎಂದು ಅಂಬೇಡ್ಕರ್ ಸೇವಾ ಸಮಿತಿ ತಾಲೂಕು ಅಧ್ಯಕ್ಷ ಕೆಸ್ತೂರು ಸಿದ್ಧರಾಜು ಖಂಡಿಸಿದರು.

ಈ ಸಂಬಂಧ ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಗುರುವಾರ ಸೇವಾ ಸಮಿತಿಯಿಂದ ನಡೆದ ಸಭೆಯಲ್ಲಿ ಅವರು ಮಾತನಾಡಿದರು. ಮಸಣಾಪುರ ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಯುವಕನೊಬ್ಬ ಸೆಗಣಿಯನ್ನು ಬಳಿದಿದ್ದಾನೆ. ಇದನ್ನು ಕಂಡು ಗ್ರಾಮಸ್ಥರು ಅವನನ್ನು ಹಿಡಿದಿದ್ದಾರೆ. ತಮ್ಮ ಆಕ್ರೋಶವನ್ನು ಹೊರ ಹಾಕಿದ್ದಾರೆ. ನಂತರ ಪೊಲೀಸರು ಈತನನ್ನು ಬಂಧಿಸಿದ್ದಾರೆ. ಅಂಬೇಡ್ಕರ್‌ರವರು ದಲಿತ ಸಮುದಾಯದ ವ್ಯಕ್ತಿಯಾಗಿದ್ದರೂ ದೇಶದ ಪ್ರತಿ ಜಾತಿ, ಧರ್ಮದವ-ರಿಗೂ ತಮ್ಮ ಸಂವಿಧಾನದ ಮೂಲಕ ಸಮಾನ ಹಕ್ಕುಗಳನ್ನು ನೀಡಿದ್ದಾರೆ. ಇಂತಹ ರಾಷ್ಟ್ರನಾಯಕರನ್ನು ಅವಮಾನಿಸುವ ಕೆಲಸ ನಡೆಯುತ್ತಿರುವುದು ಹೇಯ ಕೃತ್ಯವಾಗಿದೆ. ಇಂತಹ ಕೃತ್ಯ ಎಸೆಗಿದ ವ್ಯಕ್ತಿಗಳನ್ನು ಸಮರ್ಥಿಸಿಕೊಳ್ಳುತ್ತಿರುವುದು ಸರಿಯಾದ ಕ್ರಮವಲ್ಲ. ಇದರೊಂದಿಗೆ ಈ ಘಟನೆಯ ಬಳಿಕ ಹಾಲಿ ಹಾಗೂ ಮಾಜಿ ಶಾಸಕರು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಈ ಕ್ಷೇತ್ರದಲ್ಲಿ ಗೆದ್ದಿರುವರೆಲ್ಲಾ ಮೊದಲು ದಲಿತ ಸಮುದಾಯದವರೇ ಆಗಿದ್ದಾರೆ. ಅವರು ಈ ಘಟನೆಗೆ ಕಾರಣನಾದ ವ್ಯಕ್ತಿ ವಿರುದ್ಧ ಮಾತನಾಡಿದ್ದಾರೆ. ಇಲ್ಲಿ ತಪ್ಪು ಯಾರೇ ಮಾಡಿದ್ದರೂ ಅವರಿಗೆ ಶಿಕ್ಷೆ ಕಟ್ಟಿಟ್ಟ ಬುತ್ತಿ. ಆದರೆ ಇವರ ವಿರುದ್ಧವೂ ಕೆಲವು ವ್ಯಕ್ತಿಗಳು ಮಾಡುತ್ತಿರುವ ಆರೋಪ ಖಂಡನೀಯವಾಗಿದೆ.

ಕಾರ್ಯದರ್ಶಿ ಯರಿಯೂರು ನಟರಾಜು ಮಾತನಾಡಿ, ನಮ್ಮಲ್ಲಿ ಅಂಬೇಡ್ಕರ್‌ರವರಿಗೆ ಅವಮಾನ ಮಾಡುವ ಚಾಳಿ ಮಾತ್ರ ನಡೆಯುತ್ತಿದೆ. ಇತರೆ ರಾಷ್ಟ್ರನಾಯಕರು, ಜಾತಿ ನಾಯಕರಿಗೆ ಇಲ್ಲದ ಅಪಮಾನ ಇವರಿಗೆ ಏಕಾಗುತ್ತಿದೆ ಎಂದು ಅರ್ಥ-ವಾಗುತ್ತಿಲ್ಲ. ಅವಮಾನ ಮಾಡುವ ವ್ಯಕ್ತಿಗಳನ್ನು ಸಮರ್ಥನೆ ಮಾಡುವರು ಸಮಾಜದ ಶಾಂತಿ ಕದಡುವ ವ್ಯಕ್ತಿಗಳಾಗಿದ್ದಾರೆ. ಆರೋಪಿಗೆ ಕಠಿಣ ಶಿಕ್ಷೆಯಾಗಬೇಕು. ಇಂತಹ ವ್ಯಕ್ತಿಗಳು ಯಾವುದೇ ಸಮುದಾಯವಾಗಲಿ ಅವರನ್ನು ಸಮರ್ಥಿಸಿಕೊಳ್ಳುವ ವ್ಯವಸ್ಥೆ ನಿಲ್ಲಬೇಕು ಎಂದರು.

ದುಗ್ಗಹಟ್ಟಿ ಮಾದೇಶ್ ಮಾತನಾಡಿದರು. ಸಮಿತಿ ಖಜಾಂಚಿ ಮಹದೇವಯ್ಯ, ಗೌತಮ್ ನಟ-ರಾಜು, ನಾಗರಾಜು, ಉಮಾಶಂಕರ್, ನಂಜುಂಡಸ್ವಾಮಿ ಸೇರಿದಂತೆ ಅನೇಕರು ಇದ್ದರು.

# ಬಿಡುಗಡೆ ಆಯ್ತು 'ಸ್ಪೈಡರ್ ಮ್ಯಾನ್' ಟ್ರೈಲರ್



ಹೊಸ 'ಸ್ಪೈಡರ್‌ಮ್ಯಾನ್' ಸಿನಿಮಾ ಬಿಡುಗಡೆಗೆ ರೆಡಿಯಾಗಿದೆ. ಸಿನಿಮಾಕ್ಕೆ 'ಸ್ಪೈಡರ್ ಮ್ಯಾನ್: ಬ್ರ್ಯಾಂಡ್ ನ್ಯೂ ಡೇ' ಎಂದು ಹೆಸ-ರಿಡಲಾಗಿದ್ದು, ಸಿನಿಮಾದ ಎರಡನೇ ಟ್ರೈಲರ್ ಇದೀಗ ಬಿಡುಗಡೆಯಾಗಿದೆ. ಈ ಹಿಂದಿನ 'ಸ್ಪೈಡರ್‌ಮ್ಯಾನ್: ನೋ ವೇ ಹೋಮ್' ಸಿನಿಮಾನಲ್ಲಿ ಸ್ಪೈಡರ್‌ಮ್ಯಾನ್ ಅನ್ನು ಇಡೀ ಜಗತ್ತೇ ಮರೆತು ಹೋಗುತ್ತದೆ. ಅವನ ಗೆಳೆಯರು, ಕುಟುಂಬದವರು ಎಲ್ಲರೂ ಸ್ಪೈಡರ್‌ಮ್ಯಾನ್ ಇದ್ದನೆಂಬುದನ್ನೇ ಮರೆತಿದ್ದಾರೆ. ಹಾಗಾಗಿ ಇದೀಗ 'ಸ್ಪೈಡರ್‌ಮ್ಯಾನ್' ಒಂಟಿಯಾಗಿದ್ದಾನೆ. ಅವನಿಗೆ ಗೆಳೆಯರಿಲ್ಲ, ಅವನ ಗರ್ಲ್‌ಫ್ರೆಂಡ್ ಸಹ ಬೇರೊಬ್ಬನ ಜೊತೆಗಿದ್ದಾಳೆ. ಇದೀಗ ಬಿಡುಗಡೆ ಆಗಿರುವ ಟ್ರೈಲರ್ ನೋಡಿದರೆ ಆತನ ಗೆಳೆಯರೇ ಈಗ ವೈರಿಗಳಾಗಿದ್ದಾರೆ.

ಈಗ ಬಿಡುಗಡೆ ಆಗಿರುವ ಟ್ರೈಲರ್‌ನಲ್ಲಿ ತೋರಿಸಿ ರುವಂತೆ ಪೀಟರ್ ('ಸ್ಪೈಡರ್‌ಮ್ಯಾನ್') ನ್ಯೂ ಯಾರ್ಕ್‌ನಲ್ಲಿ ಒಬ್ಬಂಟಿಯಾಗಿ ವಾಸಿಸುತ್ತಾ, ಸ್ಪೈಡರ್ ಮ್ಯಾನ್ ಆಗಿ ಬದುಕುತ್ತಿರುವುದು ಕಾಣುತ್ತದೆ. ನಗರ ವನ್ನು ರಕ್ಷಿಸುತ್ತಿದ್ದರೂ, ತನ್ನ ಸ್ನೇಹಿತರು ಮತ್ತು ಪ್ರೀತಿಪಾತ್ರರೊಂದಿಗಿನ ಸಂಪರ್ಕವನ್ನು ಕಳೆದು ಕೊಂಡಿರುವ ನೋವು ಅವನಲ್ಲಿ ಎದ್ದು ಕಾಣುತ್ತದೆ.

ಈ ಟ್ರೈಲರ್‌ನಲ್ಲಿ ಪೀಟರ್‌ಗೆ ಉಂಟಾಗುತ್ತಿರುವ ನಿಗೂಢ ದೈಹಿಕ ಬದಲಾವಣೆ ಅಥವಾ ರೂಪಾಂತರದ ಬಗ್ಗೆ ತೋರಿಸಲಾಗಿದೆ. ಸ್ಪೈಡರ್‌ಮ್ಯಾನ್ ದೇಹದಲ್ಲಿ ಬದಲಾವಣೆ ಆಗುತ್ತಿದ್ದು, ಆತ ಕೆಲ ಬಾರಿ ಒಳ್ಳೆಯವನಾಗಿ ಕೆಲ ಬಾರಿ ಕೆಟ್ಟವನಾಗಿಯೂ ವರ್ತಿಸುತ್ತಿದ್ದಾನೆ. ಅವನ ಕಣ್ಣುಗಳು ಕಪ್ಪಾಗುತ್ತಿದ್ದು, ವಿಲನ್ ಆಗಿ ಬದಲಾಗುತ್ತಿದ್ದಾನೆ. ತನ್ನಲ್ಲಿರುವ ಋಣಾತ್ಮಕ ಅಂಶವನ್ನು ತೆಗೆದು ಹಾಕುವ ಪ್ರಯತ್ನವೂ ಮಾಡುತ್ತಿದ್ದಾನೆ.

ಟ್ರೈಲರ್‌ನಲ್ಲಿನ ಅತ್ಯಂತ ಅನಿರೀಕ್ಷಿತ ಕ್ಷಣವೆಂದರೆ ಹಲ್ಕ್ ಮತ್ತು ಸ್ಪೈಡರ್ ಮ್ಯಾನ್ ನಡುವಿನ ಕಾದಾಟ. ತನ್ನ ದೇಹದಲ್ಲಿನ ಬದಲಾವಣೆಗಳ ಬಗ್ಗೆ ಬ್ಯಾನ್ನರ್‌ನ ಸಹಾಯ ಪಡೆಯಲು ಪೀಟರ್ ಹೋಗುತ್ತಾನೆ, ಆದರೆ ವಿಷಯವು ಇಬ್ಬರೂ ಹೀರೋಗಳ ನಡುವಿನ ಭೀಕರ ಕದನಕ್ಕೆ ದಾರಿ ಮಾಡಿಕೊಡುತ್ತದೆ. ಹಲ್ಕ್ ತನ್ನ ಸ್ವಂತ ಇಚ್ಛೆಯಿಂದಲ್ಲದೆ, ಯಾವುದೋ ನಿಗೂಢ ಶಕ್ತಿಯ ಪ್ರಭಾವಕ್ಕೆ ಒಳಗಾಗಿ ಸ್ಪೈಡರ್ ಮ್ಯಾನ್ ಮೇಲೆ ದಾಳಿ ಮಾಡುತ್ತಿರಬಹುದು ಎಂಬ ಸುಳಿವು ಟ್ರೈಲರ್‌ನಲ್ಲಿದೆ. ಅಸಲಿಗೆ ಇಬ್ಬರೂ ಅವೇ ಂಜರ್ಸ್ ಟೀಮ್‌ನಲ್ಲಿರುವವರು ಆದರೆ ಈಗ ಅವರೇ ವಿರೋಧಿಗಳಾಗಿ ಕಿತ್ತಾಡಿದ್ದಾರೆ.

ಟ್ರೈಲರ್‌ನಲ್ಲಿ ಸಾಕಷ್ಟು ಆಕ್ಷನ್, ಭಾವುಕ ಸನ್ನಿವೇಶಗಳನ್ನು ತೋರಿಸಲಾಗಿದೆ. ಆದರ ಜೊತೆಗೆ ಕೆಲವು ಕುತೂಹಲಗಳನ್ನು ಸಹ ಮೂಡಿಸಲಾಗಿದೆ. ಕೆಲವು ಹೊಸ ಪಾತ್ರಗಳನ್ನು ಈ ಸಿನಿಮಾನಲ್ಲಿ ಪರಿಚಯ ಮಾಡಿಸಲಾಗಿದೆ. ಜನರ ಮನಸ್ಸನ್ನು ಕಬ್ಜ ಮಾಡುವ ಪಾತ್ರ ಒಂದಿದೆ. ಇನ್ನೂ ಕೆಲವು ಹೊಸ ಪಾತ್ರಗಳಿವೆ. ಜಪಾನಿ ಸಮುರಾಯ್ ರೀತಿಯ ಜನರ ವಿರುದ್ಧ ಸ್ಪೈಡರ್ ಮ್ಯಾನ್ ಫೈಟ್ ಮಾಡುತ್ತಿದ್ದಾನೆ. ಇದೆಲ್ಲ ಈ ಹಿಂದಿನ ಸ್ಪೈಡರ್‌ಮ್ಯಾನ್ ಕತೆಗಳಿಂದ ಹೊರತಾಗಿರುವ ಅಂಶಗಳಾಗಿವೆ.

# ರಾಜಕಾರಣದಿಂದ ಮತ್ತೆ ಚಿತ್ರರಂಗಕ್ಕೆ? ಯೋಗೀಶ್ವರ್ ಕಂಬ್ಯಾಕ್ ಸುದ್ದಿ ವೈರಲ್

**ಬೆಂಗಳೂರು:** ಕನ್ನಡ ಚಿತ್ರರಂಗದಲ್ಲಿ ಮತ್ತೆ ನಟ ಹಾಗೂ ರಾಜಕಾರಣಿ ಸಿ.ಪಿ. ಯೋಗೀಶ್ವರ್ ಅವರ ಹೆಸರು ಸದ್ದು ಮಾಡತೊಡಗಿದೆ. ಹಲವು ವರ್ಷಗಳಿಂದ ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಂಡಿರುವ ಯೋಗೀಶ್ವರ್ ಇದೀಗ ಮತ್ತೆ ಬೆಳ್ಳಿತೆರೆಗೆ ಮರಳಲಿದ್ದಾರೆಯೇ ಎಂಬ ಚರ್ಚೆ ಸ್ಯಾಂಡಲ್‌ವುಡ್ ವಲಯದಲ್ಲಿ ಜೋರಾಗಿದೆ.

ಈ ನಡುವೆ ಅವರ ಪುತ್ರ ಧ್ಯಾನ್ ಯೋಗೀಶ್ವರ್ ಅವರನ್ನು ಕನ್ನಡ ಚಿತ್ರರಂಗಕ್ಕೆ ನಾಯಕ ನಟನಾಗಿ ಪರಿಚಯಿಸುವ ಸಿದ್ಧತೆ ಕೂಡ ನಡೆಯುತ್ತಿದ್ದು, ತಂದೆ–ಮಗ ಇಬ್ಬರ ಸಿನಿ ಪಯಣದ ಕುರಿತಾಗಿ ಚಿತ್ರರಂಗದಲ್ಲಿ ಕುತೂಹಲ ಹೆಚ್ಚಾಗಿದೆ. ಧ್ಯಾನ್ ಅವರ ಮೊದಲ ಚಿತ್ರಕ್ಕೆ ಸಂಬಂಧಿಸಿದ ಪೂರ್ವಭಾವಿ ಕೆಲಸಗಳು ಈಗಾಗಲೇ ಆರಂಭವಾಗಿವೆ ಎನ್ನಲಾಗುತ್ತಿದ್ದು, ಅದೇ ಸಂದರ್ಭದಲ್ಲಿ ಸಿ.ಪಿ. ಯೋಗೀಶ್ವರ್ ಅವರ ಕಂಬ್ಯಾಕ್ ಚಿತ್ರವನ್ನೂ ಘೋಷಿಸುವ ಸಾಧ್ಯತೆಗಳಿವೆ.

**'ಸೈನಿಕ 2' ಮೂಲಕ ಮರಳುವ ನಿರೀಕ್ಷೆ:** ಚಿತ್ರರಂಗದ ಮೂಲಗಳ ಪ್ರಕಾರ, ಯೋಗೀಶ್ವರ್ ತಮ್ಮ ಸಿನಿ ಬದುಕಿನಲ್ಲಿ ಮಹತ್ವದ ಮೈಲಿಗಲ್ಲಾಗಿದ್ದ 'ಸೈನಿಕ' ಚಿತ್ರದ ಸೀಕ್ವೆಲ್ 'ಸೈನಿಕ 2' ಮೂಲಕ ಮತ್ತೆ ಪ್ರೇಕ್ಷಕರ ಮುಂದೆ ಬರುವ ಸಾಧ್ಯತೆ ಇದೆ. ಈ ಕುರಿತ ಅಧಿಕೃತ ಘೋಷಣೆ ಇನ್ನೂ ಹೊರಬಂದಿಲ್ಲವಾದರೂ, ಚಿತ್ರರಂಗದಲ್ಲಿ ಈ ಸುದ್ದಿ ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ.

2002ರಲ್ಲಿ ಬಿಡುಗಡೆಯಾದ 'ಸೈನಿಕ' ಚಿತ್ರ ಯೋಗೀಶ್ವರ್ ಅವರಿಗೆ ನಟನಾಗಿ ವಿಶೇಷ ಗುರುತನ್ನು ತಂದುಕೊಟ್ಟಿತ್ತು. ದೇಶಭಕ್ತಿ, ಕರ್ತವ್ಯನಿಷ್ಠೆ, ಸಾಹಸ ಮತ್ತು ತ್ಯಾಗದ ಕಥಾಹಂದರ ಹೊಂದಿದ್ದ ಈ ಚಿತ್ರದಲ್ಲಿ ಅವರು ಸೇನಾ ಅಧಿಕಾರಿಯ ಪಾತ್ರದಲ್ಲಿ ಅಭಿನಯಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದ್ದರು. ಇಂದಿಗೂ ಆ ಚಿತ್ರವನ್ನು ಯೋಗೀಶ್ವರ್ ಅವರ ವೃತ್ತಿಜೀವನದ ಪ್ರಮುಖ ಚಿತ್ರಗಳಲ್ಲಿ ಒಂದಾಗಿ ಪರಿಗಣಿಸಲಾಗುತ್ತದೆ.

ಹೀಗಾಗಿ 'ಸೈನಿಕ 2' ಚಿತ್ರ ಸಾಕಾರಗೊಂಡರೆ ಅದು ಕೇವಲ ಒಂದು ಹೊಸ ಸಿನಿಮಾ ಮಾತ್ರವಲ್ಲ, ಯೋಗೀಶ್ವರ್ ಅವರ ಸಿನಿ ಬದುಕಿನ ಎರಡನೇ ಇನ್ನಿಂಗ್ಸ್‌ಗೆ ಚಾಲನೆ ನೀಡುವ ಮಹತ್ವದ ಪ್ರಯತ್ನವಾಗಲಿದೆ ಎನ್ನಲಾಗುತ್ತಿದೆ.




**ಜುಲೈನಲ್ಲಿ ಅಧಿಕೃತ ಘೋಷಣೆ ಸಾಧ್ಯತೆ:** ಮೂಲಗಳ ಪ್ರಕಾರ, ಜುಲೈ ತಿಂಗಳಿನಲ್ಲಿ ವಿಶೇಷ ಕಾರ್ಯಕ್ರಮದ ಮೂಲಕ ಧ್ಯಾನ್ ಯೋಗೀಶ್ವರ್ ಅವರ ಮೊದಲ ಸಿನಿಮಾ ಹಾಗೂ ಸಿ.ಪಿ. ಯೋಗೀಶ್ವರ್ ಅವರ ಕಂಬ್ಯಾಕ್ ಚಿತ್ರದ ಬಗ್ಗೆ ಅಧಿಕೃತ ಘೋಷಣೆ ಮಾಡುವ ಸಾಧ್ಯತೆ ಇದೆ. ಇದರಿಂದ ಚಿತ್ರರಂಗದ ಗಮನ ಈಗಾಗಲೇ ಈ ಯೋಜನೆಗಳತ್ತ ಹರಿದಿದೆ.

ಆದರೆ 'ಸೈನಿಕ 2' ಚಿತ್ರದ ನಿರ್ದೇಶಕರು ಯಾರು, ನಿರ್ಮಾಣ ಸಂಸ್ಥೆ ಯಾವುದು, ಇತರ ಪ್ರಮುಖ ಕಲಾವಿದರು ಯಾರು ಎಂಬ ಕುರಿತು ಇನ್ನೂ ಯಾವುದೇ ಅಧಿಕೃತ ಮಾಹಿತಿ ಬಹಿರಂಗವಾಗಿಲ್ಲ.

**ಧ್ಯಾನ್ ಯೋಗೀಶ್ವರ್‌ಗೆ ನಾಗಣ್ಣ ನಿರ್ದೇಶನ?:** ಇನ್ನೊಂದೆಡೆ, ಧ್ಯಾನ್ ಯೋಗೀಶ್ವರ್ ಅಭಿನಯದ ಮೊದಲ ಚಿತ್ರವನ್ನು ಕನ್ನಡದ ಖ್ಯಾತ ನಿರ್ದೇಶಕ ನಾಗಣ್ಣ ನಿರ್ದೇಶಿಸಲಿದ್ದಾರೆ ಎಂಬ ಮಾಹಿತಿ ಹ-ರಿದಾಡುತ್ತಿದೆ. ಕುಟುಂಬ ಕಥಾಹಂದರ, ವಾಣಿಜ್ಯ ಅಂಶಗಳು ಹಾಗೂ ಭಾವನಾತ್ಮಕ ನಿರೂಪಣೆಯಲ್ಲಿ ಹೆಸರುವಾಸಿಯಾಗಿರುವ ನಾಗಣ್ಣ, ಹೊಸ ಪ್ರತಿಭೆಯನ್ನು ಪರಿಚಯಿಸುವ ಜವಾಬ್ದಾರಿಯನ್ನು ಹೊತ್ತಿದ್ದಾರೆ ಎನ್ನಲಾಗಿದೆ.

ಚಿತ್ರಕ್ಕೆ ಕಥೆಗಾರ ಎಂ.ಎಸ್. ರಮೇಶ್ ಕಥೆ ಮತ್ತು ಚಿತ್ರಕಥೆ ರಚಿಸಲಿದ್ದು, ಖ್ಯಾತ ಛಾಯಾಗ್ರಾಹಕ ಶೇಖರ್ ಚಂದ್ರು ಛಾಯಾಗ್ರಹಣದ ಜವಾಬ್ದಾರಿ ವಹಿಸಿಕೊಳ್ಳುವ ಸಾಧ್ಯತೆ ಇದೆ. ಜೊತೆಗೆ ಕನ್ನಡ ಚಿತ್ರರಂಗದ ಜನಪ್ರಿಯ ಸಂಗೀತ ನಿರ್ದೇಶಕ ವಿ. ಹರಿಕೃಷ್ಣ ಸಂಗೀತ ನೀಡಲಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಅನುಭವಿ ತಾಂತ್ರಿಕ ತಂಡದೊಂದಿಗೆ ಧ್ಯಾನ್ ಅವರನ್ನು ಭರ್ಜರಿಯಾಗಿ ಪರಿಚಯಿಸುವ ಯೋಜನೆ ರೂಪುಗೊಂಡಿದೆ ಎಂದು ಮೂಲಗಳು ತಿಳಿಸಿವೆ.

**ನಟನಾಗಿ ಯೋಗೀಶ್ವರ್ ಸಾಧನೆ:** ರಾಜಕೀಯ ಕ್ಷೇತ್ರಕ್ಕೆ ಪೂರ್ಣ ಪ್ರಮಾಣದಲ್ಲಿ ಪ್ರವೇಶಿಸುವ ಮೊದಲು ಸಿ.ಪಿ. ಯೋಗೀಶ್ವರ್ ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ಅಭಿಮಾನಿ ಬಳಗವನ್ನು ಹೊಂದಿದ್ದರು. ಆಕ್ಷನ್, ಕುಟುಂಬ ಹಾಗೂ ಸಾಮಾಜಿಕ ಕಥಾಹಂದರಗಳ ಹಲವು ಚಿತ್ರಗಳಲ್ಲಿ ಅಭಿನಯಿಸಿ ಗಮನ ಸೆಳೆದಿದ್ದರು.

'ಉತ್ತರ ಧ್ರುವದಿಂದ ದಕ್ಷಿಣ ಧ್ರುವಕು', 'ಜೊತೆಗಾರ', 'ಯಕ್ಷ', 'ರಾವಣ', 'ಬಂಗಾರದ ಜಿಂಕೆ', 'ಅಂಬಿ' ಸೇರಿದಂತೆ ಹಲವು ಸಿನಿಮಾಗಳಲ್ಲಿ ಅವರು ನಟಿಸಿದ್ದರು. ವಿಶೇಷವಾಗಿ ಗ್ರಾಮೀಣ ಮತ್ತು ಆಕ್ಷನ್ ಪಾತ್ರಗಳಲ್ಲಿ ಅವರ ಅಭಿನಯ ಪ್ರೇಕ್ಷಕರ ಮೆಚ್ಚುಗೆ ಪಡೆದಿತ್ತು.

**ರಾಜಕೀಯ ಮತ್ತು ಸಿನಿಮಾ ಎರಡರಲ್ಲೂ ಬ್ಯುಸಿ?:** ಪ್ರಸ್ತುತ ರಾಜಕೀಯವಾಗಿ ಸಕ್ರಿಯರಾಗಿರುವ ಯೋಗೀಶ್ವರ್, ಮತ್ತೊಮ್ಮೆ ಸಿನಿಮಾ ಕ್ಷೇತ್ರಕ್ಕೆ ಕಾಲಿಟ್ಟರೆ ರಾಜಕೀಯ ಮತ್ತು ಸಿನಿ ಬದುಕಿನ ನಡುವೆ ಹೇಗೆ ಸಮತೋಲನ ಸಾಧಿಸುತ್ತಾರೆ ಎಂಬ ಪ್ರಶ್ನೆಯೂ ಚರ್ಚೆಗೆ ಗ್ರಾಸವಾಗಿದೆ.

ರಾಜಕೀಯ ಜವಾಬ್ದಾರಿಗಳ ನಡುವೆ ಚಿತ್ರರಂಗಕ್ಕೆ ಸಮಯ ಮೀಸಲಿಡುವುದು ಸುಲಭದ ಕೆಲಸವಲ್ಲ. ಆದರೂ 'ಸೈನಿಕ 2' ಯೋಜನೆ ಮುಂದುವರಿದರೆ, ಅದು ಅಭಿಮಾನಿಗಳಿಗೆ ವಿಶೇಷ ಉಡ-ುಗೊರೆಯಾಗಲಿದೆ ಎನ್ನಲಾಗುತ್ತಿದೆ.

**ಕುತೂಹಲ ಹೆಚ್ಚಿಸಿದ ತಂದೆ–ಮಗನ ಸಿನಿ ಪಯಣ:** ಒಂದೆಡೆ ಧ್ಯಾನ್ ಯೋಗೀಶ್ವರ್ ನಾಯಕನಾಗಿ ಚಿತ್ರರಂಗ ಪ್ರವೇಶಕ್ಕೆ ಸಜ್ಜಾಗಿದ್ದರೆ, ಮತ್ತೊಂದೆಡೆ ಸಿ.ಪಿ. ಯೋಗೀಶ್ವರ್ ಕಂಬ್ಯಾಕ್ ಕುರಿತ ಸುದ್ದಿಗಳು ಅಭಿಮಾನಿಗಳಲ್ಲಿ ಹೊಸ ನಿರೀಕ್ಷೆ ಹುಟ್ಟಿಸಿವೆ. ಅಧಿಕೃತ ಘೋಷಣೆ ಹೊರಬರದಿದ್ದರೂ, ತಂದೆ–ಮಗ ಇಬ್ಬರ ಸಿನಿಮಾಗಳು ಒಂದೇ ವೇದಿಕೆಯಲ್ಲಿ ಘೋಷಣೆಯಾಗುವ ಸಾಧ್ಯತೆ ಸ್ಯಾಂಡಲ್‌ವುಡ್‌ನಲ್ಲಿ ಭಾರೀ ಕುತೂಹಲ ಮೂಡಿಸಿದೆ.

ಸದ್ಯಕ್ಕೆ ಎಲ್ಲರ ಚಿತ್ತ ಜುಲೈನಲ್ಲಿ ಹೊರಬೀಳುವ ಸಾಧ್ಯತೆಯಿರುವ ಅಧಿಕೃತ ಪ್ರಕಟಣೆಯತ್ತ ನೆಟ್ಟಿದ್ದು, 'ಸೈನಿಕ 2' ನಿಜವಾಗಿಯೂ ಸಾಕಾರವಾಗುತ್ತದೆಯೇ ಎಂಬುದನ್ನು ಕಾದುನೋಡಬೇಕಾಗಿದೆ.